**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ**

**(ಕರ್ನಾಟಕ ಸರ್ಕಾರದ ಉದ್ದಿಮೆ)**

ಕಾವೇರಿ ಭವನ, 9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕೆಂಪೇಗೌಡ ರಸ್ತೆ, ಬೆಂಗಳೂರು

<table>
<tr><td>1</td><td>ಯೋಜನೆಯ ಹೆಸರು</td><td>ಆಶ್ರಯ – ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ</td></tr>
<tr><td>2</td><td>ನಿವೇಶನದ ಅಳತೆ</td><td>ಗರಿಷ್ಠ 30*40 ಅಡಿ = ಪ್ರತಿ ಫಲಾನುಭವಿಗೆ</td></tr>
<tr><td>3</td><td>ಆರ್ಥಿಕ ಸಹಾಯ ಒದಗಿಸುವ ವಿಧಾನಗಳು</td><td>ನಿವೇಶನಗಳ ಹಂಚಿಕೆ/ನಿರ್ಮಾಣಕ್ಕೆ ಬೇಕಾಗುವ ಸಾಲ ಅಥವಾ ಸಹಾಯ ಧನದ ಮೊತ್ತದ ಮಿತಿಯನ್ನು ಸರ್ಕಾರವು ಆಗಿಂದಾಗ್ಗೆ ನಿಗದಿಪಡಿಸಬಹುದಾದ ಮಾರ್ಪಾಡುಗಳಿಗೆ ಒಳಪಟ್ಟಿರುತ್ತದೆ.</td></tr>
<tr><td></td><td>ಎ) ಆರ್ಥಿಕ ಸಹಾಯ</td><td>ಜಮೀನು ಖರೀದಿಸಲು ಈ ಕೆಳಗೆ ತಿಳಿಸಿರುವ ಮಾರ್ಗಸೂಚಿಗಳಂತೆ ಜಿಲ್ಲಾಧಿಕಾರಿಗಳಿಗೆ ಸಹಾಯಧನ ಬಿಡುಗಡೆ ಮಾಡಲಾಗುವುದು.</td></tr>
<tr><td></td><td>ಬಿ) ಜಮೀನು ಖರೀದಿ</td><td>ಗ್ರಾಮೀಣ ಪ್ರದೇಶಗಳಲ್ಲಿ ಜಮೀನು ಖರೀದಿಸಲು ಗ್ರಾಮೀಣ ನಿವೇಶನ ಯೋಜನೆಗಳಡಿ ನಿವೇಶನ ಹಂಚಿಕೆ ಮಾಡಲು ಖಾಸಗಿ ಜಮೀನನ್ನು ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ ವಇ 33 ಹೆಚ್‌ಎಹೆಚ್ 2016 (ಭಾ–2), ಬೆಂಗಳೂರು, ದಿನಾಂಕ 12.07.2016 ರಲ್ಲಿ ಜಮೀನು ಖರೀದಿ ದರಗಳನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ.
<table>
<tr><th>ಪ್ರದೇಶ</th><th>ಮಾರ್ಗಸೂಚಿ ಬೆಲೆ</th><th>ನಿಗದಿಪಡಿಸಲಾದ ಗರಿಷ್ಠ ಮಿತಿ (ಪ್ರತಿ ಎಕರೆಗೆ) ರೂ.ಲಕ್ಷಗಳಲ್ಲಿ</th></tr>
<tr><td>ಗ್ರಾಮೀಣ ಪ್ರದೇಶ</td><td>ಮಾರ್ಗಸೂಚಿ ಬೆಲೆಯ ನಾಲ್ಕುಪಟ್ಟಿನವರೆಗೆ</td><td>9.00</td></tr>
</table>
<ul>
<li>ಕರ್ನಾಟಕ ಮುದ್ರಾಂಕ ಶುಲ್ಕ ಕಾಯ್ದೆ 1957 ವಿಧಿ45(ಬಿ)(3) ರಂತೆ ನಿಗದಿಪಡಿಸಿರುವ ಮಾರ್ಗಸೂಚಿ ಬೆಲೆಯ ನಾಲ್ಕು ಪಟ್ಟಿನವರೆಗೆ ಜಮೀನು ಖರೀದಿಸಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. (ರೂ.9.00 ಲಕ್ಷ ಮೀರದಂತೆ)</li>
<li>ಮಾರ್ಗಸೂಚಿ ಬೆಲೆಯ ನಾಲ್ಕು ಪಟ್ಟಿಗೂ ಅಧಿಕವಾಗಿದ್ದು ಪರಿಷ್ಕೃತ ಗರಿಷ್ಠ ಮಿತಿಗಿಂತ ಕಡಿಮೆ ಇರುವ ಪ್ರಸ್ತಾವನೆಗಳನ್ನು ಮಾತ್ರ ಸರ್ಕಾರದ ಅನುಮೋದನೆಗೆ ಸಲ್ಲಿಸುವಂತೆ ಇಲ್ಲವಾದಲ್ಲಿ ಬದಲಿ ಜಮೀನು ಖರೀದಿಗೆ ಕ್ರಮವಹಿಸುವುದು.</li>
<li>ಮೇಲ್ಕಾಣಿಸಿದಂತೆಯೂ ಜಮೀನು ಖರೀದಿ ಸಾಧ್ಯವಾಗದಿದ್ದ ಪಕ್ಷದಲ್ಲಿ, ಮನೆ ನಿವೇಶನಗಳ ಹಂಚಿಕೆಗಾಗಿ ಜಿಲ್ಲಾಧಿಕಾರಿಗಳಿಗೆ The Karnatak Acquision of Lands for Grant of House Sites Act, 1972(Karnataka Act 18 of 1973) ಮತ್ತು ಅದಕ್ಕೆ ಸಂಬಂಧಿಸಿದ ನಿಯಮಾವಳಿಗಳಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ವಸತಿಗೆ ಯೋಗ್ಯವಾದ ಭೂಮಿಯನ್ನು ಭೂಸ್ವಾಧಿನಪಡಿಸಿಕೊಳ್ಳಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸಂದರ್ಭಾನುಸಾರ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸುವುದು.</li>
</ul></td></tr>
<tr><td></td><td>ಸಿ) ನಿವೇಶನಗಳನ್ನು ರಚಿಸಲು:</td><td>ಖರೀದಿಸಿದ ಅಥವಾ ಸರ್ಕಾರಿ ಜಮೀನನ್ನು ಅಭಿವೃದ್ಧಿಪಡಿಸಿ ನಿವೇಶನಗಳನ್ನು ರಚಿಸಲು ಪ್ರತಿ ನಿವೇಶನಕ್ಕೆ ರೂ.3000/–ಗಳಂತೆ ಅನುದಾನ ಬಿಡುಗಡೆ ಮಾಡಲಾಗುವುದು.</td></tr>
<tr><td></td><td>ಜಮೀನು ಖರೀದಿ ಸಮಿತಿ :</td><td>ಸದರಿ ಯೋಜನೆಯಡಿ ಮಾರ್ಗಸೂಚಿ ದರದ ನಾಲ್ಕು ಪಟ್ಟು ದರದವರೆಗೆ ಜಮೀನು ಖರೀದಿಸಲು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಈ ಕೆಳಗಿನಂತೆ ಅಧಿಕಾರಯುತ ಸಮಿತಿಯನ್ನು ರಚಿಸಲಾಗಿದೆ.<br><br>ಜಿಲ್ಲಾಧಿಕಾರಿಗಳು : ಅಧ್ಯಕ್ಷರು<br>ಸ್ಥಳೀಯ ಶಾಸಕರು : ಸದಸ್ಯರು<br>ಉಪ ವಿಭಾಗಾಧಿಕಾರಿಗಳು : ಸದಸ್ಯರು<br>ತಹಸೀಲ್ದಾರರು : ಸದಸ್ಯರು<br>ತಾಲ್ಲೂಕು ಪಂಚಾಯಿತಿಯ<br>ಕಾರ್ಯನಿರ್ವಾಹಕ ಅಧಿಕಾರಿ : ಸದಸ್ಯ ಕಾರ್ಯದರ್ಶಿ</td></tr>
<tr><td></td><td></td><td></td></tr>
</table>

| | | |
|---|---|---|
| 5 | ಆಯ್ಕೆಯಾಗಲು ಇರಬೇಕಾದ ಅರ್ಹತೆಗಳು : | 1. ಫಲಾನುಭವಿಯು ಸಂಬಂಧಪಟ್ಟ ಗ್ರಾಮೀಣ ಪ್ರದೇಶದಲ್ಲಿ ವಾಸಬಾಗಿರಬೇಕು.<br>2. ವಾರ್ಷಿಕ ಆದಾಯ ರೂ.1,20,000/–ಗಳ ಮಿತಿಗಿಂತ ಕಡಿಮೆ ಇರಬೇಕು.<br>3. ನಿವೇಶನ ಹಕ್ಕುಪತ್ರವನ್ನು ಮಹಿಳೆಯರ ಹೆಸರಿನಲ್ಲಿ ಮಾತ್ರ ವಿತರಿಸಲಾಗುವುದು. (ಅಂಗವಿಕಲರು, ವಿಧುರರು, ಮಾಜಿ ಸೈನಿಕರು ಮತ್ತು ಹಿರಿಯ ನಾಗರೀಕರನ್ನು ಹೊರತುಪಡಿಸಿ)<br>4. ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ನಿವೇಶನ/ವಸತಿ ಸೌಲಭ್ಯ ಪಡೆದಿರಬಾರದು.<br>5. ನಿಯಮಾನುಸಾರ ಪರಿಶಿಷ್ಟ ಜಾತಿ/ಪಂಗಡದವರಿಗೆ ಶೇ.24.10 ಮೀಸಲಾತಿ ಇರುತ್ತದೆ.<br>6. ಮಾಜಿ ಯೋಧರು/ಅವರ ವಿಧವೆಯರು ಆಗಿದ್ದಲ್ಲಿ ನಿವೇಶನ ಹಂಚಿಕೆಯಲ್ಲಿ ಶೇ. 1 ರಷ್ಟು ಮೀಸಲಾತಿ ಮತ್ತು ಅಂಗವಿಕಲರಿಗೆ ಶೇ.5 ರಷ್ಟು ಮೀಸಲಾತಿಯನ್ನು ಒದಗಿಸಲಾಗುವುದು. |
| 6 | ಫಲಾನುಭವಿಗಳ ಆಯ್ಕೆ | ಈಗಾಗಲೇ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ವಸತಿರಹಿತರ/ನಿವೇಶನರಹಿತರ ಸಮೀಕ್ಷೆಯನ್ನು ನಡೆಸಲಾಗಿದ್ದು ನಿಗಮದ ವೆಬ್‌ಸೈಟ್ ನಲ್ಲಿ ನಮೂದಿಸಲಾಗಿರುತ್ತದೆ. ಸದರಿ ನಿವೇಶನರಹಿತರ ಮತ್ತು ವಸತಿರಹಿತರ ಪಟ್ಟಿಯಿಂದಲೇ ಫಲಾನುಭವಿಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡುವುದು. |
| 7 | ಅನುಷ್ಠಾನದ ಉಸ್ತುವಾರಿ | ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಅನುಷ್ಠಾನ ಉಸ್ತುವರಿಯ ಜವಾಬ್ಧಾರಿ ಹೊಂದಿರುತ್ತಾರೆ. |
| 8 | ಇತರೆ ವಿಷಯಗಳು | ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಪ್ರತಿಯೊಬ್ಬ ನಿವೇಶನರಹಿತ/ವಸತಿರಹಿತರಿಗೆ ಮುಂದಿನ ಐದು ವರ್ಷಗಳಲ್ಲಿ ಒಂದು ನಿವೇಶನ ಒದಗಿಸುವುದು ಹಾಗೂ ಮನೆಯನ್ನು ಕಟ್ಟಿಕೊಳ್ಳಲು ಸಹಾಯ ಹಸ್ತ ನೀಡುವುದು ಕರ್ನಾಟಕ ಸರ್ಕಾರ ಹಾಗೂ ನಿಗಮದ ಸದುದ್ದೇಶವಾಗಿದೆ. ಯಾರು ಈ ಯೋಜನೆಯಡಿ ಅರ್ಹರಾಗಿರುವರೋ ಅಂತಹವರು ಮಾತ್ರ ಈ ಯೋಜನೆಯ ಸೌಲಭ್ಯ ಪಡೆಯಬಹುದಾಗಿದ್ದು, ಯಾವುದೇ ಕಾರಣಕ್ಕೂ ಮನೆ/ನಿವೇಶನ ಇರುವವರು ಈ ಸವಲತ್ತನ್ನು ಪಡೆಯಲು ಅರ್ಜಿ ಹಾಕಬಾರದು. |

**ಹೆಚ್ಚಿನ ವಿವರಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಿ :**

ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ, ಕಾವೇರಿ ಭವನ, 9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕೆಂಪೇಗೌಡ ರಸ್ತೆ, ಬೆಂಗಳೂರು–560009.

(ದೂರವಾಣಿ : **91–80–23118888**, ಫ್ಯಾಕ್ಸ್ : **91–80–22247317**)

ಇ–ಮೇಲ್ : **rgrhcl@rediffmail.com /rgrhcl@kar.nic.in /**

ವೆಬ್‌ಸೈಟ್ : http:\\ashraya.kar.nic.in

**ರಾಜೀವ್ ಗಾಂಧಿs ವಸತಿ ನಿಗಮ ನಿಯಮಿತ**

**(ಕರ್ನಾಟಕ ಸರ್ಕಾರದ ಉದ್ದಿಮೆ)**

**ಕಾವೇರಿ ಭವನ, 9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕೆಂಪೇಗೌಡ ರಸ್ತೆ, ಬೆಂಗಳೂರು**

<table>
<tr><td>1</td><td>ಯೋಜನೆಯ ಹೆಸರು</td><td>ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆ</td></tr>
<tr><td>2</td><td>ನಿವೇಶನದ ಅಳತೆ</td><td>ಗರಿಷ್ಠ 20*30 ಅಡಿ = ಪ್ರತಿ ಫಲಾನುಭವಿಗೆ</td></tr>
<tr><td></td><td>ಎ) ಆರ್ಥಿಕ ಸಹಾಯ ಒದಗಿಸುವ ವಿಧಾನಗಳು</td><td>ಜಮೀನು ಖರೀದಿಸಲು ಈ ಕೆಳಗೆ ತಿಳಿಸಿರುವ ಮಾರ್ಗಸೂಚಿಗಳಂತೆ ಜಿಲ್ಲಾಧಿಕಾರಿಗಳಿಗೆ ಸಹಾಯಧನ ಬಿಡುಗಡೆ ಮಾಡಲಾಗುವುದು.</td></tr>
<tr><td></td><td>ಬಿ) ಜಮೀನು ಖರೀದಿ</td><td>
ಜಮೀನು ಖರೀದಿಸಲು ಈ ಕೆಳಗೆ ತಿಳಿಸಿರುವ ಮಾರ್ಗಸೂಚಿಗಳಂತೆ ಜಿಲ್ಲಾಧಿಕಾರಿಗಳಿಗೆ ಸಹಾಯಧನ ಬಿಡುಗಡೆ ಮಾಡಲಾಗುವುದು.
ಗ್ರಾಮೀಣ ಹಾಗೂ ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆಗಳಡಿ ನಿವೇಶನ ಹಂಚಿಕೆ ಮಾಡಲು ಖಾಸಗಿ ಜಮೀನನ್ನು ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ ವಇ 33 ಹೆಚ್ ಎಹೆಚ್ 2016 (ಭಾ-2), ಬೆಂಗಳೂರು, ದಿನಾಂಕ 12.07.2016 ರಲ್ಲಿ ಜಮೀನು ಖರೀದಿ ದರಗಳನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ.
<table>
<tr><th>ಕ್ರ. ಸಂ</th><th>ಪ್ರದೇಶ</th><th>ಮಾರ್ಗಸೂಚಿ ಬೆಲೆ</th><th>ನಿಗದಿಪಡಿಸಲಾದ ಗರಿಷ್ಠ ಮಿತಿ (ಪ್ರತಿ ಎಕರೆಗೆ) ರೂ.ಲಕ್ಷಗಳಲ್ಲಿ</th></tr>
<tr><td>1</td><td>ಪಟ್ಟಣ ಪಂಚಾಯತಿ</td><td rowspan="5">ಮಾರ್ಗಸೂಚಿ ಬೆಲೆಯ ಮೂರು ಪಟ್ಟು</td><td>12.00</td></tr>
<tr><td>2</td><td>ಪುರಸಭೆ</td><td>15.00</td></tr>
<tr><td>3</td><td>ನಗರಸಭೆ</td><td>22.50</td></tr>
<tr><td>4</td><td>ಮಹಾನಗರ ಪಾಲಿಕೆ</td><td>37.50</td></tr>
<tr><td>5</td><td>ಬೃಹತ್ ಬೆಂಗಳೂರು ಮಹಾನಗರ (ಬಿ.ಬಿ.ಎಂ.ಪಿ)</td><td>75.00</td></tr>
</table>
<ul>
<li>ಕರ್ನಾಟಕ ಮುದ್ರಾಂಕ ಶುಲ್ಕ ಕಾಯ್ದೆ 1957 ವಿಧಿ 45 (ಬಿ)(3) ರಂತೆ ನಿಗದಿಪಡಿಸಿರುವ ಮಾರ್ಗಸೂಚಿ ಬೆಲೆಯ ನಾಲ್ಕು ಪಟ್ಟಿನವರೆಗೆ ಜಮೀನು ಖರೀದಿಸಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. (ಆಯಾ ಸ್ಥಳೀಯ ಸಂಸ್ಥೆಗಳಿಗೆ ನಿಗದಿಪಡಿಸಲಾದ ಗರಿಷ್ಠ ಮಿತಿ ಮೀರದಂತೆ)</li>
<li>ಮಾರ್ಗಸೂಚಿ ಬೆಲೆಯ ಮೂರು ಪಟ್ಟು ಅಥವಾ ಆಯಾ ಸ್ಥಳೀಯ ಸಂಸ್ಥೆಗಳಿಗೆ ನಿಗದಿಪಡಿಸಲಾದ ಪರಿಷ್ಕೃತ ಗರಿಷ್ಟ ದರ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು ಹಾಗೂ ಜಿಲ್ಲಾ ಸಮಿತಿಯು ನಿಗದಿಪಡಿಸಿರುವ ದರವು ಮಾರ್ಗಸೂಚಿ ದರದ ಮೂರು ಪಟ್ಟಿಗೂ ಅಧಿಕವಾಗಿದ್ದು ಪರಿಷ್ಕೃತ ಗರಿಷ್ಟ ಮಿತಿಗಿಂತ ಕಡಿಮೆ ಇರುವ ಪ್ರಸ್ತಾವನೆಗಳನ್ನು ಮಾತ್ರ ಸರ್ಕಾರದ ಅನುಮೋದನೆಗೆ ಸಲ್ಲಿಸುವಂತೆ ಇಲ್ಲವಾದಲ್ಲಿ ಬದಲಿ ಜಮೀನು ಖರೀದಿಗೆ ಕ್ರಮವಹಿಸುವುದು.</li>
<li>ಮೇಲ್ಕಾಣಿಸಿದಂತೆಯೂ ಜಮೀನು ಖರೀದಿ ಸಾಧ್ಯವಾಗದಿದ್ದ ಪಕ್ಷದಲ್ಲಿ, ಮನೆ</li>
</ul>
</td></tr>
</table>

| | | |
|---|---|---|
| | | ನಿವೇಶನಗಳ ಹಂಚಿಕೆಗಾಗಿ ಜಿಲ್ಲಾಧಿಕಾರಿಗಳಿಗೆ The Karnatak Acquision of Lands for Grant of House Sites Act, 1972 (Kanrataka Act 18 of 1973) ಮತ್ತು ಅದಕ್ಕೆ ಸಂಬಂಧಿಸಿದ ನಿಯಮಾವಳಿಗಳಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ವಸತಿಗೆ ಯೋಗ್ಯವಾದ ಭೂಮಿಯನ್ನು ಭೂಸ್ವಾಧಿನಪಡಿಸಿಕೊಳ್ಳಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸಂದರ್ಭಾನುಸಾರ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸುವುದು. |
| | ಸಿ) ನಿವೇಶನಗಳನ್ನು ರಚಿಸಲು: | ಖರೀದಿಸಿದ ಅಥವಾ ಸರ್ಕಾರಿ ಜಮೀನನ್ನು ಅಭಿವೃದ್ಧಿಪಡಿಸಿ ನಿವೇಶನಗಳನ್ನು ರಚಿಸಲು ಪ್ರತಿ ನಿವೇಶನಕ್ಕೆ ರೂ.2000/-ಗಳಂತೆ ಅನುದಾನ ಬಿಡುಗಡೆ ಮಾಡಲಾಗುವುದು. |
| 4 | ಜಮೀನು ಖರೀದಿ ಸಮಿತಿ : | ಸದರಿ ಯೋಜನೆಯಡಿ ಮಾರ್ಗಸೂಚಿ ದರದ ಮೂರು ಪಟ್ಟು ದರದವರೆಗೆ ಜಮೀನು ಖರೀದಿಸಲು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಈ ಕೆಳಗಿನಂತೆ ಅಧಿಕಾರಯುತ ಸಮಿತಿಯನ್ನು ರಚಿಸಲಾಗಿದೆ.<br><br>ಜಿಲ್ಲಾಧಿಕಾರಿಗಳು : ಅಧ್ಯಕ್ಷರು<br>ಸ್ಥಳೀಯ ಶಾಸಕರು : ಸದಸ್ಯರು<br>ಉಪ ವಿಭಾಗಾಧಿಕಾರಿಗಳು : ಸದಸ್ಯರು<br>ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು : ಸದಸ್ಯರು<br>ನಗರ ಸ್ಥಳೀಯ ಸಂಸ್ಥೆಯ<br>ಆಯುಕ್ತರು/ಮುಖ್ಯಾಧಿಕಾರಿಗಳು : ಸದಸ್ಯ ಕಾರ್ಯದರ್ಶಿಗಳು |
| 5 | ಆಯ್ಕೆಯಾಗಲು ಇರಬೇಕಾದ ಅರ್ಹತೆಗಳು : | 1. ಫಲಾನುಭವಿಯು ಸಂಬಂಧಪಟ್ಟ ಗ್ರಾಮೀಣ ಪ್ರದೇಶದಲ್ಲಿ ವಾಸಬಾಗಿರಬೇಕು.<br>2. ವಾರ್ಷಿಕ ಆದಾಯ ರೂ.2,00,000/-ಗಳ ಮಿತಿಗಿಂತ ಕಡಿಮೆ ಇರಬೇಕು.<br>3. ನಿವೇಶನ ಹಕ್ಕುಪತ್ರವನ್ನು ಮಹಿಳೆಯರ ಹೆಸರಿನಲ್ಲಿ ಮಾತ್ರ ವಿತರಿಸಲಾಗುವುದು. (ಅಂಗವಿಕಲರು, ವಿಧುರರು, ಮಾಜಿ ಸೈನಿಕರು ಮತ್ತು ಹಿರಿಯ ನಾಗರೀಕರನ್ನು ಹೊರತುಪಡಿಸಿ)<br>4. ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ನಿವೇಶನ/ವಸತಿ ಸೌಲಭ್ಯ ಪಡೆದಿರಬಾರದು.<br>5. ನಿಯಮಾನುಸಾರ ಪರಿಶಿಷ್ಟ ಜಾತಿ/ಪಂಗಡದವರಿಗೆ ಶೇ.24.10 ಮೀಸಲಾತಿ ಇರುತ್ತದೆ.<br>6. ಮಾಜಿ ಯೋಧರು/ಅವರ ವಿಧವೆಯರು ಆಗಿದ್ದಲ್ಲಿ ನಿವೇಶನ ಹಂಚಿಕೆಯಲ್ಲಿ ಶೇ. 1 ರಷ್ಟು ಮೀಸಲಾತಿ ಮತ್ತು ಅಂಗವಿಕಲರಿಗೆ ಶೇ.5 ರಷ್ಟು ಮೀಸಲಾತಿಯನ್ನು ಒದಗಿಸಲಾಗುವುದು. |
| 6 | ಫಲಾನುಭವಿಗಳ ಆಯ್ಕೆ | 1. ಈಗಾಗಲೇ ಜಿಲ್ಲೆಗಳಲ್ಲಿ ತಯಾರಿಸಿದ ನಿವೇಶನರಹಿತ/ವಸತಿರಹಿತರಿಗೆ ಪಟ್ಟಿಯಿಂದಲೇ ಫಲಾನುಭವಿಗಳನ್ನು ನಗರ ಆಶ್ರಯ ಸಮಿತಿ ಸಭೆಯಲ್ಲಿ ಆಯ್ಕೆ.<br>2. ನಗರ ಆಶ್ರಯ ಸಮಿತಿಯಲ್ಲಿ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ಪಡೆಯಲಾಗುವುದು. |

| | | |
|---|---|---|
| 7 | ಅನುಷ್ಠಾನದ ಉಸ್ತುವಾರಿ | ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಅನುಷ್ಠಾನ ಉಸ್ತುವಾರಿಯ ಜವಾಬ್ದಾರಿ ಹೊಂದಿರುತ್ತಾರೆ. |

ಹೆಚ್ಚಿನ ವಿವರಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಿ :

ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ, ಕಾವೇರಿ ಭವನ, 9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕೆಂಪೇಗೌಡ ರಸ್ತೆ, ಬೆಂಗಳೂರು-560009.

(ದೂರವಾಣಿ : **91-80-23118888**, ಫ್ಯಾಕ್ಸ್ : **91-80-22247317)**

ಇ-ಮೇಲ್ : **rghcl@rediffmail.com/rgrhcl@kar.nic.in**

ವೆಬ್‌ಸೈಟ್ **:http:\\ashraya.kar.nic.in**